**ಕರ್ನಾಟಕ ಸರ್ಕಾರ**

**ಸಮಾಜ ಕಲ್ಯಾಣ ಇಲಾಖೆ**

ಸಕಇ/ಪಪೂತಕೇ/ಎಸ್-6/ಸಿಆರ್-9/ ಪ.ಜಾ.ಪ್ರ/ 2021-22

ಮುಖ್ಯ ಆಡಳಿತಾಧಿಕಾರಿಗಳ ಕಛೇರಿ.
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ.
ಡಾ: ಬಿ.ಆರ್. ಅಂಬೇಡ್ಕರ್ ಭವನ.
ಬೆಂಗಳೂರು. ದಿನಾಂಕ: 02-09-2021.

## ಅಧಿಸೂಚನೆ

ವಿಷಯ: 2021-22 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ ತರಬೇತಿಯನ್ನು ನೀಡುವ ಬಗ್ಗೆ.

- - -

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2021-22ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ಮೂಲಕ JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ.

JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ ತರಬೇತಿಗೆ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಬಂದಂತಹ ಅರ್ಜಿಗಳನ್ನು ನಿಗಧಿತ ಗುರಿಗನುಗುಣವಾಗಿ ವಿದ್ಯಾರ್ಥಿಗಳ 10 ನೇ ತರಗತಿಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸಲಾಗುವುದು.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಪ್ರಥಮ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ದ್ವಿತೀಯ ಪಿ.ಯು.ಸಿ ಮುಕ್ತಾಯದವರೆಗೂ 24 ತಿಂಗಳು ಅಥವಾ 2023 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯಲಿರುವ JEE / NEET ಪ್ರವೇಶ ಪರೀಕ್ಷೆಯವರೆಗೂ ಹಾಗೂ ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ 10 ತಿಂಗಳು ಅಥವಾ 2022 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯಲಿರುವ JEE / NEET ಪ್ರವೇಶ ಪರೀಕ್ಷೆಯವರೆಗೂ ಆನ್-ಲೈನ್ ತರಬೇತಿ ನೀಡಲಾಗುವುದು.

JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ ತರಬೇತಿಯ ಅವಧಿ, ಶೈಕ್ಷಣಿಕ ವಿದ್ಯಾರ್ಹತೆ, ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಲಾಸ ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ. | ವಿವರ | |
|---|---|---|
| 01 | ಕೋರ್ಸ್‌ನ ವಿವರ | ಪ.ಜಾತಿ ಮತ್ತು ಪ.ವರ್ಗದ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ (Online) ತರಬೇತಿ. |
| 02 | ತರಬೇತಿ ಅವಧಿ (ತಿಂಗಳು) | 1. ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿ ದಿನ ಎರಡು ಗಂಟೆಯಂತೆ 24 ತಿಂಗಳು ಅಥವಾ 2023 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯಲಿರುವ (JEE / NEET ಪ್ರವೇಶ ಪರೀಕ್ಷೆಯವರೆಗೂ) ಒಟ್ಟು 1200 ರಿಂದ 1300 ಗಂಟೆಗಳ ತರಬೇತಿ ನೀಡಲಾಗುತ್ತದೆ.<br>2. ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪ್ರತಿ ದಿನ 2 ಗಂಟೆಯಂತೆ 10 ತಿಂಗಳು ಅಥವಾ 2022 ರ ( ಜೆ.ಇ.ಇ. / ನೀಟ್ ಪ್ರವೇಶ ಪರೀಕ್ಷೆವರೆಗೂ) ಕನಿಷ್ಠ 550 ರಿಂದ 600 ಗಂಟೆಗಳ ತರಬೇತಿ ನೀಡಲಾಗುತ್ತದೆ. |
| 03 | ವಯಸ್ಸು | 16 ರಿಂದ 40 ವರ್ಷ |
| 04 | ವಿದ್ಯಾರ್ಹತೆ | 10 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. |
| 05 | ಅಭ್ಯರ್ಥಿಯ ಸಾಮಾನ್ಯ ಅರ್ಹತೆ | 1. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರತಕ್ಕದ್ದು.<br>2. ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಕ್ಕೆ ಸೇರಿದ ಜಾತಿ ಪಟ್ಟಿಯಲ್ಲಿರುವ ಜಾತಿಗೆ ಸೇರಿರತಕ್ಕದ್ದು.<br>3. ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷಗಳ ಒಳಗಿರತಕ್ಕದ್ದು.<br>4. ಅಭ್ಯರ್ಥಿಯು ಕನಿಷ್ಠ 16 ರಿಂದ 40 ವರ್ಷದೊಳಗಿರತಕ್ಕದ್ದು.<br>5. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದೊಳಗೆ ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರತಕ್ಕದ್ದು. |
| 06 | ಷರತ್ತು | ಅಭ್ಯರ್ಥಿಯು JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ (Online) ತರಬೇತಿಗೆ ವಿಧಿಸುವ ಎಲ್ಲಾ ನಿಬಂಧನೆಗಳನ್ನು ಪೂರೈಸತಕ್ಕದ್ದು. |

<table>
<tr><td>07</td><td>ಸ್ಥಾನ ಹಂಚಿಕೆ</td><td>
<table>
<tr><td>ಮೀಸಲಾತಿ</td><td>ಸ್ಥಾನ ಹಂಚಿಕೆ</td><td>ವಿವರಣೆ</td></tr>
<tr><td>ಅಂಗವಿಕಲ / ವಿಕಲಚೇತನ</td><td>ಶೇ.04</td><td>Right of person with disabilities acts -2016 ರಂತೆ ಸಕ್ಷಮ ಪ್ರಾಧಿಕಾರದಿಂದ ದಿವ್ಯಾಂಗ ಪ್ರಮಾಣ ಪತ್ರ ಹೊಂದಿದವರು.</td></tr>
<tr><td>ಹಾಸ್ಟೆಲ್ ವಿದ್ಯಾರ್ಥಿಗಳು</td><td>ಶೇ.10</td><td>ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡದ ನಿರ್ದೇಶನಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಪ್ರಿಮೆಟ್ರಿಕ್/ ಪೋಸ್ಟ್ ಮೆಟ್ರಿಕ್/ ಆಶ್ರಮ ಶಾಲೆ ವಸತಿ ಶಾಲೆಯಲ್ಲಿನ ಕನಿಷ್ಠ ಮೂರು ವರ್ಷ ನಿಲಯಾರ್ಥಿಗಳಾಗಿದ್ದ ವಿದ್ಯಾರ್ಥಿಗಳು.</td></tr>
<tr><td>ವಸತಿ ಶಾಲೆಯ ವಿದ್ಯಾರ್ಥಿಗಳು</td><td>ಶೇ.10</td><td>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಅಡಿ ಬರುವ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ ಅಂಬೇಡ್ಕರ್ ವಸತಿ ಶಾಲೆಯಲ್ಲಿ ಕನಿಷ್ಠ 05 ವರ್ಷ ವಿದ್ಯಾಭ್ಯಾಸ ಮಾಡಿದ ಅಭ್ಯರ್ಥಿಗಳು. ದೃಢೀಕರಣ ಪತ್ರವನ್ನು ನಿಲಯ ಮೇಲ್ವಿಚಾರಕರು ಮತ್ತು ಪ್ರಾಂಶುಪಾಲರು ನೀಡುವುದು.</td></tr>
<tr><td>ಮಹಿಳಾ ಅಭ್ಯರ್ಥಿಗಳು</td><td>ಶೇ.33</td><td>ಮಹಿಳಾ ಮೀಸಲಾತಿಯಂತೆ</td></tr>
<tr><td>ಸೂಕ್ಷ್ಮ / ಅತಿ ಸೂಕ್ಷ್ಮ ಸಮುದಾಯ / ಸಫಾಯಿ ಕರ್ಮಚಾರಿಗಳ ಮಕ್ಕಳು</td><td>ಶೇ.05</td><td>ಸರ್ಕಾರ ಗುರುತಿಸಿರುವ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮಾತ್ರ</td></tr>
</table>
</td></tr>
<tr><td>08</td><td>ಆಯ್ಕೆ ವಿಧಾನ</td><td>ಅಭ್ಯರ್ಥಿಗಳು 10 ನೇ ತರಗತಿಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.</td></tr>
<tr><td>09</td><td>ಅರ್ಜಿ ಸಲ್ಲಿಸಲು ವೆಬ್‌ಸೈಟ್ ವಿಳಾಸ</td><td>www.sw.kar.nic.in</td></tr>
<tr><td>10</td><td>ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ</td><td>18-09-2021</td></tr>
</table>

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**ಸೂಚನೆ:-**

1. JEE (Advance & Mains) ಮತ್ತು NEET ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 24 ಮತ್ತು 10 ತಿಂಗಳುಗಳ ಆನ್-ಲೈನ್ (Online) ತರಬೇತಿ ನೀಡುವ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಶಿಷ್ಯವೇತನ ಪಾವತಿಸುವುದಿಲ್ಲ.
2. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ಪ್ರಥಮ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ದ್ವಿತೀಯ ಪಿ.ಯು.ಸಿ ಮುಕ್ತಾಯದವರೆಗೂ 24 ತಿಂಗಳು ಅಥವಾ 2023 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯಲಿರುವ JEE / NEET ಪ್ರವೇಶ ಪರೀಕ್ಷೆಯವರೆಗೂ ಆನ್-ಲೈನ್ ತರಬೇತಿ ನೀಡಲಾಗುವುದು.
3. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021-22) ದ್ವಿತೀಯ ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ 10 ತಿಂಗಳು ಅಥವಾ 2022 ರ ಏಪ್ರಿಲ್ / ಮೇ ಮಾಹೆಯಲ್ಲಿ ನಡೆಯಲಿರುವ JEE / NEET ಪ್ರವೇಶ ಪರೀಕ್ಷೆಯವರೆಗೂ ಆನ್-ಲೈನ್ ತರಬೇತಿ ನೀಡಲಾಗುವುದು.

ಮುಖ್ಯ ಆಡಳಿತಾಧಿಕಾರಿಗಳು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು.